

# ಹೌಬೆಲೆಗು

■ ಕನಕರಾಜ್ ಆರನಕಟ್ಟೆ

ನಲವತ್ತಾರನೆಯ ಹುಟ್ಟುಹಬ್ಬದ ಹಿಂದಿನ ರಾತ್ರಿ ಶೋಭಾ ಕಡಲ ತಡಿಯಲ್ಲಿ ಕೂತಿದ್ದಳು. ಮನಸ್ಸಿಗೆ ಹಿತವೆನಿಸಲು ಶುರುವಾಗಿ ನಿಮಿಷಗಳು ಕಳೆದಿದ್ದವು. ಅವಳು ಕೂತಿದ್ದುದು ಆ ದ್ವೀಪದ ಉತ್ತರ ದಿಕ್ಕಿಗೆ... ಸಣ್ಣ ಮತ್ತು ದೊಡ್ಡ ಅಲೆಗಳ ಅನಿಯಮಿತ ಸದ್ದಿಗೆ ಮನಸ್ಸು ಕೊಟ್ಟು ಕೂತಿದ್ದವಳನ್ನು ಸ್ವಲ್ಪ ಹೊತ್ತು ಮುಂಚೆ ಮೊಬೈಲ್ ಕರೆಯೊಂದರಲ್ಲಿ ಕೇಳಿದ ವಿಷಯಗಳು ಮತ್ತೆ ಗಲಿಬಿಲಿಗೊಳಿಸಿದವು. ಥತ್... ರೂಪ ಎನ್ನುವ ಹೆಸರಲ್ಲೇ ನಾನು ಆಕೆಯ ಜೊತೆ ಮಾತನಾಡಬೇಕಿತ್ತೇ? ಹಾಳಾದವಳು... ನನ್ನನ್ನೇ ರೂಪ ಎಂದುಕೊಂಡು ನನ್ನ ಮೊಬೈಲ್ ನಂಬರ್ ಮೇಲೆ ಪೊಲೀಸ್ ಕಂಪ್ಲೆಂಟ್ ಕೊಡುತ್ತಾಳಂತೆ... ಕೊಡ್ಲಿ ಬಿಡು... ನಾನ್ ತಪ್ಪು ಮಾಡಿದ್ರೆ ತಾನೇ ಹೆದರಬೇಕು... ಅಷ್ಟಕ್ಕೂ ದೇಶ ಬಿಟ್ಟು ದೇಶ ಬರ್ತಾರಾ ಪೊಲೀಸರು! ಅದೂ ಇಂಥ ಕೇಸ್‌ಗಾಗಿ... ಆ ಹಾಳಾದ ಈಶ್ವರ್ ಈ ಸಮಯದಲ್ಲೇ ರೂಪ ಎನ್ನುವ ಹೆಸರಿನ ಹೆಂಗಸಿನ ಜೊತೆ ಓಡಿ ಹೋಗಬೇಕಿತ್ತೇ?... ಮನುಷ್ಯರೊಳಗಿನ ನೀಚತನ ಈ ಕಡಲಿನಷ್ಟೇ ಆಳವಾದುದೇನೊ...

ನನಗೆ ನೆಮ್ಮದಿ ಎನ್ನುವುದೇ ಇಲ್ಲವೇ ಅಥವಾ ಸಮಸ್ಯೆಗಳನ್ನು ನಾನೇ ಸೃಷ್ಟಿಸಿಕೊಳ್ಳುತ್ತಿದ್ದೇನೆಯೇ? ಸಮಸ್ಯೆಗಳಿಗೆ ಹೆದರಿ ಈ ದೇಶಕ್ಕೆ ಬಂದನೇ? ಈ ದ್ವೀಪದಂತೆ ಬದುಕನ್ನು ನಾನೇ ಸಂಕುಚಿತಗೊಳಿಸಿಕೊಂಡನೇ ಅಥವಾ ರೋಗರುಜಿನಗಳಿಂದ ಇಲ್ಲಿಯ ದ್ವೀಪವಾಸಿಗಳು ದೂರವಿರುವಂತೆ ನನ್ನ ಬದುಕೂ ಸುರಕ್ಷಿತವಾಗಿದೆಯೇ? ಎಮಿಲಿ ಜೆಸ್ಸಿ ಟೈಲರ್ ಹೇಳಿದಂತೆ ಜೀವನವನ್ನು ಹೊಸ ದಾರಿಗೆ ತಿರುಗಿಸಿಕೊಳ್ಳೋಣವೇ? ಕೊನೆಯ ದಿನಗಳು ಎಂದು ಯಾವುದನ್ನು ಹೇಳುವುದು? ತನ್ನ ನಿಖರ ದಿನಾಂಕವನ್ನು ತಿಳಿಸಿಯೇ ಸಾವು ಮನುಷ್ಯರನ್ನು ತಲುಪುತ್ತದೆಯೆ? ಅದರ ಭಯಕ್ಕಾಗಿ ಮನಸ್ಸಿಗೆ ಇಷ್ಟವಿಲ್ಲದ ವಿಷಯಗಳನ್ನು ಒಪ್ಪಿಕೊಳ್ಳಬೇಕೇ? ಅಥವಾ ಹೇಗಿದ್ದರೂ ಸಾಯುವುದು ಖರೆ, ಆ ಸಮಯವನ್ನು ಒಂಟಿಯಾಗಿ ನಿಂತು ಎದುರುಗೊಳ್ಳೋಣವೇ!?

ಮನಸ್ಸಿನ ತುಂಬಾ ಸಿಕ್ಕುಗಳು! ಅವುಗಳಿಂದ ಬಿಡಿಸಿಕೊಳ್ಳಲೊ ಎಂಬಂತೆ ಕಡಲ ನೋಡಿದಳು.

ಕತ್ತಲಲ್ಲದು ಚೆಂದ ಕಾಣುತ್ತಿತ್ತು. ಕಣ್ಣ ಮತ್ತಷ್ಟು ಅಗಲಿಸಿ ನೋಡಿದಳು. ಹರಡುತ್ತಿದ್ದ ಚಂದಿರ! ಆಗಸದಿಂದ ಸುರಿಯುತ್ತಿರುವ ಬೆಳಕು! ಆ ಪೋಸ್ಟ್ ಮಾಸ್ಟರನ ಮುಖ ಕಣ್ಮುಂದೆ ಬಂತು! ತಕ್ಷಣವೇ ಇಂಗ್ಲೆಂಡಿನ ಎಮಿಲಿ ಜೆಸ್ಸಿ ಟೈಲರ್‌ಳ ಕಳೆಗುಂದಿದ ಮುಖವೂ... ಮನಸ್ಸು ಕಸಿವಿಸಿಗೊಳಗಾಯ್ತು.

ಏನಾಯ್ತು ಅವಳಿಗೆ? ಯಾಕೆ ದಿಢೀರ್ ಎಂದು ಮಾಯವಾದಳು? ಎಲ್ಲಿ ಹೋದಳೋ!? ಹೋಗಿ ಹುಡುಕೋಣವೇ?

ಅಲೆಗಳು ತೇಲುತ್ತಾ ದಂಡೆಯ ಸ್ಪರ್ಶಿಸುವುದನ್ನು